1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಸಾಗರ

ಸಿ.ಸಿ ನಂ. 1536/2024

ಸಾಕ್ಷಿದಾರರ ಹೆಸರು : ಅಶೋಕ್ ಕುಮಾರ್

ತಂದೆಯ/ಗಂಡನ ಹೆಸರು : ಬೈರಲಿಂಗೇಗೌಡ

ವಯಸ್ಸು : 61 ವರ್ಷ

ಉದ್ಯೋಗ : ನಿವೃತ್ತ ಪಿ ಐ

ವಾಸಃ : ಬೆಂಗಳೂರು

ಸಿ.ಡಬ್ಲ್ಯೂ- 21 ಪಿ.ಡಬ್ಲ್ಯೂ-8

ದಿನಾಂಕಃ12.01.2026 ರಂದು ಸಾಕ್ಷಿಗೆ ವಿಡಿಯೋ ಕಾನ್ಪರೆನ್ಸ ಮುಖಾಂತರ ಪ್ರಮಾಣ ಭೋಧಿಸಲಾಯಿತು.

ಮುಖ್ಯ ವಿಚಾರಣೆ:- ಸ.ಸ. ಅ ರವರಿಂದಃ

ನಾನು ಜೂನ್ 2020 ರಿಂದ ನವೆಂಬರ್ 2021 ಯವರೆಗೆ ಸಾಗರ ಪೇಟೆ ಠಾಣೆಯಲ್ಲಿ ಪಿ ಐ ಯಾಗಿ ಕರ್ತವ್ಯ ನಿರ್ವಹಿಸಿದ್ದೆ.

ದಿಃ19.08.2021 ರಂದು ಈ ಪ್ರಕರಣದ ಕಡತವನ್ನು ಚಾಸಾ-19 ರವರಿಂದ ಪಡೆದು ತನಿಖೆಯನ್ನು ಮುಂದುವರೆಸಿ ಸಾಕ್ಷಿದಾರರ ವಿಚಾರಣೆ ಮಾಡಿರುತ್ತೇನೆ. ಅದೇ ದಿನ ಐಎಂ ವಿ ವರದಿಯನ್ನು ಪಡೆದಿರುತ್ತೇನೆ. ದಿಃ16.09.2021 ರಂದು ಇಂಡೆಮಿನಿಟಿ ಬಾಂಡ್ ಪಡೆದು ವಾಹನವನ್ನು ಮೃತರ ಹೆಂಡತಿಗೆ ಬಿಡುಗಡೆ ಮಾಡಿರುತ್ತೇವೆ ಮತ್ತು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತೇನೆ. ದಿಃ17.09.2021 ರಂದು ಪಿ ಎಂ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಆರೋಪಿಯ ವಿರುದ್ಧ ಆರೋಪ ಸಾಬೀತಾ ಹಿನ್ನೆಲೆಯಲ್ಲಿ ಅಂತಿಮ ದೋಷಾರೋಪಣೆ ಪಟ್ಟಿಯನ್ನು ತಯಾರಿಸಿ ಅದನ್ನು ಮೇಲಾಧಿಕಾರಿಗಳಿಗೆ ಹಾಗೂ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿ ಕೊಂಡಿರುತ್ತೇನೆ.

ಸಾಕ್ಷಿಗೆ ಐಎಂ ವಿ ವರದಿಯನ್ನು ತೋರಿಸಲಾಗಿ ಸಾಕ್ಷಿ ನೋಡಿ ಅದನ್ನು ಗುರುತಿಸಿದ್ದು ಸದರಿ ಐ ಎಂ ವಿ ವರದಿಯನ್ನು ನಿಪಿ-17 ಎಂದು, ಶವಾ ತನಿಖಾ ವರದಿಯನ್ನು ನಿಪಿ-18

ಎಂದು, ಪಿ ಎಂ ವರದಿಯನ್ನು ನಿಪಿ-19 ಎಂದು, ಇಂಡೆಮಿನಿಟ್ ಬಾಂಡ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-20 ಎಂದು ಗುರುತಿಸಲಾಯಿತು.

ಪಾಟೀ ಸವಾಲು :- ಆರೋಪಿ ಪರ ಶ್ರೀ. ಕೆ. ಎಲ್ ಬಿ . ವಕೀಲರಿಂದಃ-

ದಿಃ19.08.2021 ರಂದು ಈ ಪ್ರಕರಣದ ಕಡತವನ್ನು ಚಾಸಾ-19 ರವರಿಂದ ಪಡಿದು ತನಿಖೆಯನ್ನು ಮುಂದುವರೆಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ದಿನ ಐಎಂ ವಿ ವರದಿಯನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ದಿಃ16.09.2021 ರಂದು ಇಂಡೆಮಿನಿಟಿ ಬಾಂಡ್ ಪಡೆದು ವಾಹನವನ್ನು ಮೃತರ ಹೆಂಡತಿಗೆ ಬಿಡುಗಡೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮತ್ತು ವಿಚಾರಣೆ ಮಾಡಿ ಹೇಳಿಕೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ದಿಃ17.09.2021 ರಂದು ಪಿ ಎಂ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ಅಂತಿಮ ದೋಷಾರೋಪಣೆ ಪಟ್ಟಿಯನ್ನು ತಯಾರಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.